ಬರುತ್ತಾ ಇದ್ದಾರೆ. ಕಾನೂನು ಪ್ರಕಾರ ಬರುವವರನ್ನು ತಡೆಯಲು ಆಗುವುದಿಲ್ಲ. ಮಾನವೀಯತೆ ದೃಷ್ಟಿಯಿಂದ ಸಹಾಯ ಮಾಡುವ ಉದ್ದೇಶ ಸರಕಾರದ ದೃಷ್ಟಿಯಲ್ಲಿಯೂ ಇದೆ, ಕಾರ್ಪೊರೇಷನ್ ದೃಷ್ಟಿಯಲ್ಲಿಯೂ ಇದೆ.

ಶ್ರೀ ಟಿ. ಆರ್. ಶಾಮಣ್ಣ.—ಈ ರೀತಿ ಕೊಳಚೆ ಪ್ರದೇಶ ಇರುವುದು ಬೆಂಗಳೂರು ನಗರಕ್ಕೆ ಇದೊಂದು ಕ್ಯಾನ್ಸರ್ ರೋಗ ಇದ್ದ ಹಾಗೆ ಎಂಬುದು ತಮಗೆ ಗೊತ್ತಿದೆ ಅಲ್ಲವೆ ? ಈಗ ತಮಗೆ ಸರ್ವಾಧಿಕಾರ ಸಿಕ್ಕಿರುತ್ತದೆ, ಇನ್ನು ಎಷ್ಟು ದಿವಸಗಳಲ್ಲಿ ಇದನ್ನು ಸರಿಪಡಿಸುತ್ತೀರಿ.

(*No answer*)

ಶ್ರೀ ವಾಟಾಳ್ ನಾಗರಾಜ.—ಸರ್ವಾಧಿಕಾರ ಅಂದರೆ ಏನು ?

ಶ್ರೀ ಆರ್. ಎಂ. ಪಾಟೀಲ್.—ಈ ಪ್ರಶ್ನೆ ಉದ್ಭವಿಸುವುದಿಲ್ಲ. ನಾನು ಸರ್ವಾಧಿಕಾರ ತೆಗೆದುಕೊಂಡಿಲ್ಲ.

ಶ್ರೀ ಎಚ್. ಸಿದ್ದವೀರಪ್ಪ.—ನಿಮಗೆ ಸಾರ್ವಭೌಮತ್ವ ಇದೆ.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ.—ಈ ಜನರಿಗೆ 18 ರೂಪಾಯಿ ಬಾಡಿಗೆ ಕೊಡಲು ಶಕ್ತಿ ಇಲ್ಲ. ಆದುದರಿಂದ ಈ ಹಣವನ್ನು ಸಮಾಜ ಕಲ್ಯಾಣ ಇಲಾಖೆಯಿಂದ ಅಥವಾ ಬೇರೆ ಯಾವುದಾದರೂ ಯೋಜನೆಯಿಂದ ಒದಗಿಸಿ ಅವರಿಗೆ ಈ ಮನೆಗಳನ್ನು ಮುಫತ್ತಾಗಿ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಆರ್. ಎಂ. ಪಾಟೀಲ್.—ಇದನ್ನು ವಿಚಾರ ಮಾಡಿದ್ದೇವೆ. ಸಮಾಜ ಕಲ್ಯಾಣ ಶಾಖೆಯವರೂ ವಿಚಾರ ಮಾಡಿದ್ದಾರೆ. ಅವರಿಗೆ ಸಹಾಯ ಮಾಡಬೇಕು ಎಂಬ ಸದುದ್ದೇಶದಿಂದ ಇದನ್ನು ಮಾಡಿದ್ದೇವೆ. ಆದರೂ ಕೂಡ ಕೇಂದ್ರ ಸರಕಾರದ ಸ್ಕೀಂ ಪ್ರಕಾರ ಇಷ್ಟು ಬಾಡಿಗೆ ಕೊಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ನೋಡೋಣ.

———

Janata Bazar

*Q.—55. Sri VATAL NAGARAJ (Chickpet).—

Will the Minister for Development and Co-operation be pleased to state:—

(*a*) the purpose of starting Janatha Bazar ;
(*b*) the expenditure incurred thereby ;
(*c*) whether it has come to their notice that it is not beneficial to the common people ?

A.—Sri P. M. NADAGOUDA (Minister for Development and Co-operation).—

(*a*) The purpose of starting Janata Bazar was for arranging distribution of consumers articles including essential commodities at reasonble prices to the consumers with a view to check the rising trend of prices.

(*b*) Rs. 18,95,000.

(*c*) No.

ಶ್ರೀ ವಾಟಾಳ್ ನಾಗರಾಜ.—ಜನತಾ ಬಜಾರ್ ಸಾಮಾನ್ಯ ಜನತೆಗೆ ಅನುಕೂಲವಾಡಿ ಕೊಡುವುದಕ್ಕಾಗಿ ಇದೆ ಎಂದು ಹೇಳಿದೆ. ಆದರೆ ಜನತಾ ಬಜಾರಿನಲ್ಲಿ ರಾಗಿ, ಅಕ್ಕಿ, ಜೋಳ ದೊರೆಯುವುದಿಲ್ಲ ಅಲ್ಲವೆ ?

† ಶ್ರೀ ಪಿ. ಎಂ. ನಾಡಗೌಡ.—ಸರಕಾರ ಶೀಘ್ರದಲ್ಲೇ ಅದನ್ನು ವ್ಯವಸ್ಥೆ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ.—ಜನತಾ ಬಜಾರಿನಿಂದ ಬೆಲೆ ಏರುವುದು ನಿಲ್ಲುತ್ತದೆ ಎಂದು ತಾವು ಹೇಳಿದ್ದೀರಿ. ಜನತಾ ಬಜಾರಿಗಿಂತ ಹೊರಗಡೆ ಬೆಲೆಗಳು ಕಡಿಮೆ ಇವೆ. ಆದುದರಿಂದ ಯಾವ ರೀತಿ ಜನರಿಗೆ ಅನುಕೂಲವಾಗುತ್ತದೆ ?

ಶ್ರೀ ಪಿ. ಎಂ. ನಾಡಗೌಡ.—ಅದು ತಪ್ಪು ಅಭಿಪ್ರಾಯ. ಹೊರಗಡೆ 100ಕ್ಕೆ 15 ರಷ್ಟು ಬೆಲೆ ಹೆಚ್ಚು ಇದ್ದರೆ, ಜನತಾ ಬಜಾರಿನಲ್ಲಿ 100 ಕ್ಕೆ 5 ರಿಂದ 10 ಪರ್ಸೆಂಟ್ ಬೆಲೆಗೆ ಮಾರಾಟಮಾಡಲಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಸರಕಾರ ಪ್ರಾರಂಭ ಮಾಡಿರುವ ಜನತಾ ಬಜಾರಿನಲ್ಲಿ ಸಾಮಾನುಗಳ ಬೆಲೆ ಮಾರ್ಕೆಟ್ಟಿನಲ್ಲಿ ಇರತಕ್ಕ ಬೆಲೆಗಿಂತ ಸುಮಾರು ಒಂದು ರೂಪಾಯಿಗೆ ಎರಡು ಆಣೆ ಮೂರು ಆಣೆ ಜಾಸ್ತಿ ಇದೆ ಎಂಬ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಈ ಪ್ರಶ್ನೆಗೆ ಆಗಲೇ ಉತ್ತರ ಹೇಳಿದೆ.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ.—ಜನತಾ ಬಜಾರಿಗೆ ಸಾಮಾನುಗಳನ್ನು ಎಲ್ಲಿಂದ ಒದಗಿಸುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—100 ಕ್ಕೆ 20 ರಷ್ಟು at the source ದೊರೆಯುವುದರಿಂದ ಜನತಾ ಬಜಾರಿನಲ್ಲಿ ಯಾವ ಜನರು ವ್ಯವಹಾರ ಮಾಡುತ್ತಾರೋ ಅವರಿಗೆ 100 ಕ್ಕೆ 5 ರಷ್ಟು ಕಡಿಮೆ ಬೆಲೆಗೆ ಸಾಮಾನು ಸಿಕ್ಕುತ್ತದೆ.

ಶ್ರೀ ಎನ್. ಚಿಕ್ಕೇಗೌಡ.—ಜನತಾ ಬಜಾರನ್ನು ತೆರೆದಿರುವ ಉದ್ದೇಶವೇನು ? ಸಿಬ್ಬಂದಿ ಖರ್ಚೇ ಜಾಸ್ತಿಯಲ್ಲವೇ

ಶ್ರೀ ಪಿ. ಎಂ. ನಾಡಗೌಡ.—ಅಲ್ಲಿ ಖರ್ಚು ಜಾಸ್ತಿಯಾದರೂ ಕೂಡ ಬೆಲೆ ಏರುವುದನ್ನು ತಡೆಗಟ್ಟಿ ಜನರಿಗೆ ಅವಶ್ಯಕವಾದ ಪದಾರ್ಥಗಳನ್ನು ನ್ಯಾಯವಾದ ಬೆಲೆಯಲ್ಲಿ ಒದಗಿಸಬೇಕೆಂಬುದು ಮುಖ್ಯವಾದ ಉದ್ದೇಶವಾಗಿದೆ.

ಶ್ರೀ ಬಿ. ಭಾಸ್ಕರಶೆಟ್ಟಿ.—ಅಲ್ಲಿ ಮಾರಾಟ ಮಾಡುವುದರಿಂದ ರಾಭ ಅಥವಾ ನಷ್ಟವೆಷ್ಟು ?

ಶ್ರೀ ಪಿ. ಎಂ. ನಾಡಗೌಡ.—ಇವತ್ತಿನವರೆಗೆ ನಷ್ಟವಾಗಿಲ್ಲ, ತಿಂಗಳಿಗೆ 3 ರಿಂದ 5 ಸಾವಿರ ರೂಪಾಯಿಗಳವರೆಗೆ ಪ್ರಾಪ್ತಿ ಇದೆ.

ಶ್ರೀ ಅಜೀಜ್ ಸೇಠ್.—ಸಹಕಾರಿ ಶಾಖೆ ಮಂತ್ರಿಗಳಿಗೆ ಹೇಚೆಯಲ್ಲಿ ಪದಾರ್ಥಗಳನ್ನು ಖರೀದಿ ಮಾಡಿ ಅಭ್ಯಾಸವಿದೆಯೇ ? ಬಜಾರಿಗಿಂತ ಜನತಾ ಬಜಾರಿನಲ್ಲಿ ಕಡಮೆ ಬೆಲೆಗೆ ಬೇಕಾದ ವಸ್ತುಗಳು ದೊರೆಯಬೇಕೆಂಬ ಉದ್ದೇಶವಿರುವುದು ಈಡೇರುತ್ತಿದೆಯೇ ? ಅಥವಾ ಹೊರಗಡೆ ದೊರೆಯುವುದಕ್ಕಿಂತ ಜಾಸ್ತಿ ಬೆಲೆಗೆ ಅಲ್ಲಿ ಮಾರಾಟವಾಗುತ್ತಿದೆಯೇ ಎಂದು ನೋಡಿದ್ದೀರಾ ? 501ನೆ ನಂಬರಿನ ನೋಪು ಹೊರಗೆ ಜನತಾ ಬಜಾರಿನಲ್ಲಿರುವ ದರಕ್ಕಿಂತ ಕಡಮೆ ಬೆಲೆಗೆ ದೊರೆಯುತ್ತಿದೆ, ಪ್ರೆಷರ್ ಕುಕ್ಕರ್ ಹೇಚೆಯಲ್ಲಿ 96 ರೂಪಾಯಿಗೆ ಸಿಕ್ಕಿದರೆ ಜನತಾಬಜಾರಿನಲ್ಲಿ ಅದಕ್ಕೆ ನೂರಹನ್ನೆರಡೂವರೆ ರೂಪಾಯಿ ಕೊಡಬೇಕು ಎಂಬುದು ಗಮನಕ್ಕೆ ಬಂದಿದೆಯೇ ? ಹೀಗಾದರೆ ಕಡಮೆ ಬೆಲೆಗೆ ದೊರೆತಂತಾಯಿತೇ ?

ಶ್ರೀ ಪಿ. ಎಂ. ನಾಡಗೌಡ.—ನಾನು ಅಲ್ಲಿಗೆ ಹೋಗಿ ಖರೀದಿಯನ್ನು ಮಾಡಿಲ್ಲ, ನಮ್ಮ ಮನೆಯವರು ಖರೀದಿಮಾಡಿದ್ದಾರೆ, ಅವರಿಗೆ ವಿಚಾರ ಗೊತ್ತಿರಬೇಕು.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ಸ್ಟೆ ೞನ್‌ಲೆಸ್ ಸ್ಟೀಲಿನ ವಸ್ತುಗಳು, ಕರ್ಪೂರ ಮುಂತಾದುವುಗಳ ಬೆಲೆ ಶೇಕಡ 200-300ರಷ್ಟು ಜಾಸ್ತಿಯಾಗಿರುವುದರಿಂದ ಅಂಥ ಪದಾರ್ಥಗಳನ್ನು ಫ್ಯಾಕ್ಟರಿಯಿಂದ ಡೈರೆಕ್ಟಾಗಿ ಜನತಾಬಜಾರಿಗೆ ತರಿಸಿ ಕಡಮೆ ಬೆಲೆಯಲ್ಲಿ ಮಾರಾಟ ಮಾಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಪಿ. ಎಂ. ನಾಡಗೌಡ.—ಆ ರೀತಿ ಮಾಡಬಹುದು.

ಶ್ರೀ ಸಿದ್ದಯ್ಯ ಕಾಶೀಮಠ.—ಜನತಾಬಜಾರಿನಲ್ಲಿ ಖಾದಿಬಟ್ಟೆ ಮತ್ತು ಹ್ಯಾಂಡ್‌ಲೂಂ ಬಟ್ಟೆಗಳನ್ನು ಮಾರದಿರುವುದಕ್ಕೆ ಕಾರಣವೇನು ?

---

†Indicates that remarks or speeches have not been revised by the member concerned.

ಶ್ರೀ ಪಿ. ಎಂ. ನಾಡಗೌಡ.—ಖಾದಿಬಟ್ಟೆಯನ್ನು ಮಾರಾಟಮಾಡಲು ಖಾದಿಬೋರ್ಡಿನ ಅಂಗಡಿಗಳಿವೆ: ಹ್ಯಾಂಡ್‌ಲೂಂ ಬಟ್ಟೆಗಳನ್ನು ಮಾರಲು ಬೇರೆ ಸೊಸೈಟಿಗಳಿವೆ.

1-30 P.M.]

ಶ್ರೀ ಇ. ನಾರಾಯಣಗೌಡ.—ಬೆಲೆಗಳ ಏರಿಕೆ ನಿಯಂತ್ರಣ ದೃಷ್ಟಿಯಿಂದ ಮಾಡಿದ್ದೇವೆ ಎಂದು ಹೇಳಿದಿರಿ. ಈ ರಾಜ್ಯದಲ್ಲಿ ಒಂದು ಲಕ್ಷಕ್ಕೂ ಹೆಚ್ಚು ಜನಸಂಖ್ಯೆ ಇರತಕ್ಕ ಅನೇಕ ಪಟ್ಟಣಗಳಲ್ಲಿ ಈ ಜನತಾ ಬಜಾರನ್ನು ಸ್ಥಾಪನೆ ಮಾಡತಕ್ಕ ದೃಷ್ಟಿ ಇದೆಯೇ ? ಇದ್ದರೆ ಅದನ್ನು ಯಾವಾಗ ಮಾಡುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಅಗಲೇ ಒಂದು ಯೋಜನೆ ಇದೆ. ಎಲ್ಲೆಲ್ಲಿ 2 ಲಕ್ಷ ಜನಸಂಖ್ಯೆ ಇದೆಯೋ ಅಲ್ಲಿ ಕೇಂದ್ರ ಸರ್ಕಾದವರೇ ತೆಗೆಯಬೇಕೆಂದು ಅಜ್ಞೆ ಮಾಡಿದ್ದಾರೆ. 2 ಲಕ್ಷ ಜನಸಂಖ್ಯೆ ಪ್ರಮಾಣ ಇರತಕ್ಕ ಸ್ಥಳಗಳ್ಲಿ ಸ್ಥಾಪನೆಮಾಡಿ ಮುಗಿದ ಮೇಲೆ ಮಾನ್ಯ ಸದಸ್ಯರ ಸೂಚನೆಯನ್ನು ಈ ಸರ್ಕಾರ ಪರಿಶೀಲನೆ ಮಾಡುತ್ತದೆ.

Sri V. N. PATIL.—Why is it that essential articles which are sold in the blackmarket are not kept in the Janatha Bazar and only advertised medicines like Vicks are kept there ?

(No reply.)

ಶ್ರೀ ಎಸ್. ಗೋಪಾಲಗೌಡ.— ಕೆಲವು ವಸ್ತುಗಳನ್ನು ತಾವು ಕಂಪೆನಿಗಳಿಂದ ಖರೀದಿ ಮಾಡಿದಾಗ ಆ ಕಂಪೆನಿಗಳು ಕೊಡತಕ್ಕ ಕಮಿಷನ್‌ನ್ನು ಯಾವ ಅಕೌಂಟ್‌ಗೆ ತೆಗೆದುಕೊಳ್ಳುತ್ತಾ ಇದ್ದೀರಿ, ಅದನ್ನು ಲಾಭದಲ್ಲಿ ಏನಾದರೂ ಕಳೆಯುತ್ತೀರಾ ? ಕಮಿಷನ್ ರೇಟ್ ನಿಗಧಿ ಮಾಡುತ್ತೀರಾ ಅಥವಾ ಕಂಪನಿಯವರು ಗೊತ್ತುಮಾಡಿದ ರೇಟಿಗೆ ಕಳೆದು ಮಾರಾಟ ಮಾಡಿ ಅವರು ಕೊಟ್ಟ ಕಮಿಷನ್ನು ಏನು ಮಾಡುತ್ತೀರಿ ?

ಶ್ರೀ ಪಿ. ಎಂ. ನಾಡಗೌಡ.—ಅದನ್ನು ವಿಚಾರ ಮಾಡುತ್ತೇನೆ.

ಶ್ರೀ ಎಸ್. ಶಿವಪ್ಪ.—ತಾವು ಜನತಾ ಬಜಾರಿನಲ್ಲಿ ಹಾಕಿರತಕ್ಕ 19 ಲಕ್ಷ ರೂಪಾಯಿಗಳಿಗೆ ಕೊನೇ ಪಕ್ಷ ಶೇಕಡ ಆರೂವರೆಯಷ್ಟಾದರೂ ಬಡ್ಡಿ ಬರಬೇಕು. ಒಂದು ತಿಂಗಳಿಗೆ 12 ಸಾವಿರ ರೂಪಾಯಿ ಲಾಭ ಬರಬೇಕು. ಈಗ ಅಷ್ಟು ಬರುತ್ತಾ ಇದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಒಂದು ತಿಂಗಳಿಗೆ 4-5 ಸಾವಿರ ರೂಪಾಯಿ ಬಂದಿದೆ.

ಶ್ರೀ ಎಸ್. ಶಿವಪ್ಪ.—ಅಲ್ಲಿಗೆ ಬಡ್ಡಿ ಸಹ ಗಿಟ್ಟುತ್ತಾ ಇಲ್ಲ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಪಿ. ಎಂ. ನಾಡಗೌಡ.—ಅತಿ ತುರ್ತಾಗ್ರತೆಯಲ್ಲಿ ಏರುತ್ತಿರುವ ಬೆಲೆಯನ್ನು ಹತೋಟಿಯಲ್ಲಡಬೇಕೆಂಬುದು ಇದರ ಮೂಲ ಉದ್ದೇಶ, ಆ ಪ್ರಕಾರ ಮಾಡುತ್ತಾ ಇದ್ದೇವೆ.

ಶ್ರೀ ಅಬ್ದುಲ್‌ಖುದ್ದುಸ್ ಅನ್ಸಾರ್.—ಅಲ್ಲಿ ಸಿಬ್ಬಂದಿ ನೇಮಕ ಮಾಡಿದ್ದೀರಲ್ಲಾ ಅವರನ್ನು ಡೈರೆಕ್ಟ್ ರಿಕ್ರೂಟ್‌ಮೆಂಟ್ ಮಾಡಿದ್ದೀರಾ ಅಥವಾ ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್ ಇಂದ ಮಾಡಿದ್ದೀರಾ ?

ಶ್ರೀ ಪಿ. ಎಂ. ನಾಡಗೌಡ.—ಸಹಕಾರಿ ಕ್ಷೇತ್ರದ ನುರಿತ ಅಧಿಕಾರಿಗಳನ್ನು ಅಲ್ಲಿ ಹಾಕಿದ್ದೇವೆ.

ಶ್ರೀ ಅಬ್ದುಲ್ ಖುದ್ದುಸ್ ಅನ್ಸಾರ್.—ಬೇರೆಯವರನ್ನೂ ತೆಗೆದುಕೊಂಡಿರುವುದು ತಮ್ಮ ಗಮನಕ್ಕೆ ಬಂದಿದೆಯೇ ?

(ಉತ್ತರ ಇಲ್ಲ)

ಶ್ರೀ ಎಸ್. ಎಸ್. ಶೆಟ್ಟರ್.—ಈ ಜನತಾ ಬಜಾರನ್ನು ತೆಗೆದ ಮೇಲೆ ಮಾರ್ಕೆಟ್ಟಿನ ಧಾರಣೆಯ ಮೇಲೆ ಏನಾದರೂ ಪರಿಣಾಮವಾಗಿದೆಯೇ ಹೇಗೆ ?

ಶ್ರೀ ಪಿ. ಎಂ. ನಾಡಗೌಡ.— ಪೂರ್ಣವಾಗಿ ಪರಿಣಾಮವಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಈ ಜನತಾ ಬಜಾರಿಗೆ ವೆಚ್ಚಮಾಡಿರತಕ್ಕ ಹಣಕ್ಕೆ ತಕ್ಕಂತೆ ಆದಾಯ ಬರದೇ ಇರುವುದರಿಂದ ಇದನ್ನು ಮುಚ್ಚುವುದಕ್ಕೆ ಪ್ರಯತ್ನ ಮಾಡುತ್ತೀರಾ ?

(ಉತ್ತರ ಇಲ್ಲ)

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಮಂತ್ರಿಗಳು ಉತ್ತರ ಹೇಳಲಿಲ್ಲ, ನುಮ್ಮನೆ ತರೆ ಕುಣಿಸಿದರು, ಅದರ ಅರ್ಥವೇನೊ ನನಗೆ ಆಗಲಿಲ್ಲ.

Sri CHANDRAKANTH GURUPADAPPA.—In reply to (a) it is stated that the purpose of starting Janata Bazar was for arranging distribution of consumer articles including essential commodities at reasonable prices to the consumers with a view to check the rising trend of prices. But to our great surprise these essential commodities are not to be found there. There are only cosmetics available there and that too at very high rates. What is the Government's opinion about this ? Will essential commodities like foodgrains, etc., be made available ?

Sri P. M. NADAGOUDA.—I have already answered this question that efforts will be made.

Dr. R. NAGAN GOUD.—May I know whether this is run on business principles of getting the price of the article and also a small profit or are you subsidizing it and selling at a loss ?

ಶ್ರೀ ಪಿ. ಎಂ. ನಾಡಗೌಡ.—ನಬ್‌ಸಿಡೈಜ್ ಮಾಡುವುದಿಲ್ಲ. ತುಟಾಗ್ರತೆಯನ್ನು ಮಾತ್ರ ತಡೆಗಟ್ಟಲಾಗುವುದು.

Sri AMAREGOWDA CHANNANAGOWDA.—Are there any lists regarding essential commodities and non-essential commodities ?

(*No reply*).

ಶ್ರೀ ಎಂ. ಕೆ. ಬೊಮ್ಮೆಗೌಡ.—ಜನತಾ ಬಜಾರಿನಲ್ಲಿ ಇರತಕ್ಕ ಸಾಮಾನುಗಳೆಲ್ಲಾ ಅಂದರೆ ಬಟ್ಟೆ, ಇತರೇ ಸಾಮಾನುಗಳು ಹಳೇ ಸಾಮಾನುಗಳು ಎಲ್ಲೆಲ್ಲಿ ಇದ್ದವೋ ಅಲ್ಲಿಂದ ಅವುಗಳನ್ನು ತಂದು ಮಾರಾಟಮಾಡುತ್ತಿದ್ದಾರೆಂಬುದು ನಿಜವೇ ?

ಶ್ರೀ ಪಿ. ಎಂ. ನಾಡಗೌಡ.—ಹಾಗೇನೂ ಇಲ್ಲ.

———

Drinking Water Supply to Gudibanda

*Q.—457. Sri A. MUNIYAPPA (Bagepalli).—

Will the Minister for Municipal Administration be pleased to state :—

(*a*) when the amount for the supply of drinking water to Gudibanda town was sanctioned and the progress of the work so far made ;

(*b*) the reason for not making arrangements to supply drinking water so far ;

(*c*) whether there is any difficulty in supplying water to the above town ;

(*d*) whether they would make arrangements to supply water to the public of the above town at an early date ?